ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 619
ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 12.03.2025
ಉತ್ತರಿಸುವ ಸಚಿವರು : ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಅಲ್ಪಸಂಖ್ಯಾತರೆಂದರೆ ಯಾರು; ಯಾವ ಆಧಾರದಲ್ಲಿ ಅವರನ್ನು ಅಲ್ಪಸಂಖ್ಯಾತರು ಎಂದು ಪರಿಗಣಿಸಲಾಗಿದೆ; (ವಿವರ ನೀಡುವುದು)	ರಾಜ್ಯದಲ್ಲಿ ಈ ಕೆಳಕಂಡ ಜನಾಂಗದವರನ್ನು ಸರ್ಕಾರದ ಆದೇಶ ಸಂ:SWD (MWD) 4/LML/2007, ದಿನಾಂಕ:17.09.2007ರ ಅಧಿಸೂಚನೆಯನ್ವಯ ಮತೀಯ ಅಲ್ಪಸಂಖ್ಯಾತರು ಎಂದು ಪರಿಗಣಿಸಲಾಗಿದೆ. 1. ಮುಸ್ಲಿಂ 2. ಕ್ರಿಶ್ಚಿಯನ್ 3. ಬೌದ್ಧ 4. ಜೈನ್ 5. ಸಿಖ್ 6. ಝೋರಾಸ್ಟ್ರೀಯನ್ (ಪಾರ್ಸಿ)
ಆ)	ರಾಜ್ಯದಲ್ಲಿ ಅಲ್ಪಸಂಖ್ಯಾತರನ್ನು ಯಾವ ಬಹುಸಂಖ್ಯಾತರ ಪರಿಗಣನೆಗೆ ತೆಗೆದುಕೊಂಡು ಅಲ್ಪಸಂಖ್ಯಾತರು ಎಂಬುದಾಗಿ ಗುರುತಿಸಿದೆ; (ವಿವರ ನೀಡುವುದು)	ರಾಜ್ಯದಲ್ಲಿ ಅಲ್ಪಸಂಖ್ಯಾತರನ್ನಾಗಿ ಬಹುಸಂಖ್ಯಾತರ ಪರಿಗಣನೆಗೆ ತೆಗೆದುಕೊಂಡು ಗುರುತಿಸಿರುವುದಿಲ್ಲ. ಕೇಂದ್ರ ಸರ್ಕಾರದ ಅಲ್ಪಸಂಖ್ಯಾತರ ವ್ಯವಹಾರ ಸಚಿವಾಲಯದ ಅಧಿಸೂಚನೆ ಸಂ:S.O.816(E), ದಿನಾಂಕ:23.10.1993 ಮತ್ತು ಅಧಿಸೂಚನೆ ಸಂಖ್ಯೆ:FNo 1-1/2009-NCM, ದಿನಾಂಕ:27.01.2014ರ ಪ್ರಕಾರ ಮೇಲ್ಕಂಡ ಜನಾಂಗದವರನ್ನು ಅಲ್ಪಸಂಖ್ಯಾತರು ಎಂದು ಗುರುತಿಸಲಾಗಿದೆ.
ಇ)	ಅಲ್ಪಸಂಖ್ಯಾತರಿಗೂ ಬಹುಸಂಖ್ಯಾತರಿಗೂ ಇರುವ ವ್ಯತ್ಯಾಸಗಳೇನು? (ವಿವರ ನೀಡುವುದು)	ರಾಜ್ಯದಲ್ಲಿ ಪ್ರಸ್ತುತ ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರನ್ನು 2011ರ ಜನಗಣತಿ ಆಧಾರದಲ್ಲಿ ವ್ಯತ್ಯಾಸವನ್ನು ತಿಳಿಸಬಹುದಾಗಿದೆ. ಅದರಲ್ಲಿ ಸದರಿ ಜನಗಣತಿಯ ಪ್ರಕಾರ ಜನಸಂಖ್ಯೆಯ ಶೇಕಡಾವಾರು ವಿವರ ಕೆಳಕಂಡಂತಿದೆ. 1. ಬಹುಸಂಖ್ಯಾತರು - 84.29% 2. ಅಲ್ಪಸಂಖ್ಯಾತರು – 15.71% • ಮುಸ್ಲಿಂ – 12.92% • ಕ್ರಿಶ್ಚಿಯನ್ – 1.87% • ಬೌದ್ಧ - 0.16% • ಜೈನ್ - 0.72% • ಸಿಖ್ - 0.05% • ಝೋರಾಸ್ಟ್ರೀಯನ್ (ಪಾರ್ಸಿ) - 0.01%

ಸಂಖ್ಯೆ: MWD-LMQ/29/2025

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು